ದಿನಾಂಕಃ **16-11-2024** ರಂದು ಸಾಕ್ಷಿಗೆ ಪುನಃ ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಪಾಟೀ ಸವಾಲು ಶ್ರೀ ಬಿ ಡಿ ಜೆ ವಕೀಲರಿಂದಃ

ಅರ್ಜಿದಾರರು ಯಾವ ಕಾರಣಕ್ಕೆ ಈ ದಾವೆಯನ್ನು ಸಲ್ಲಿಸಿದ್ದಾರೆ ಎಂಬುದು ನನಗೆ ಗೊತ್ತಿಲ್ಲ. ಅದೇ ರೀತಿ ಯಾವ ಸರ್ವೆ ನಂಬರ್ ಸಲುವಾಗಿ ಹೂಡಿರುತ್ತಾರೆ ಎಂಬುದು ಸಹ ನನಗೆ ಗೊತ್ತಿಲ್ಲ. ಅದೇ ರೀತಿ ಸದರಿ ಸರ್ವೆ ನಂಬರ್ ಮೂಲತಹ ಯಾರಿಗೆ ಸೇರಿದ್ದು ಎಂಬುದು ಸಹ ನನಗೆ ಮಾಹಿತಿ ಇಲ್ಲ. ನಾನು ನಿವೇಶನ್ನು ಮುಜೂರ್ ಅಲ್ತಾಫ್ ಎಂಬುವವರಿಂದ ಖರೀದಿ ಮಾಡಿರುತ್ತೇನೆ. ಸದರಿಯವರಿಗೆ ಆಸ್ತಿಯು ಯಾರಿಂದ ಬಂದಿರುತ್ತದೆ ಎಂಬುದು ನನಗೆ ಗೊತ್ತಿಲ್ಲ ಆದರೆ ಅವರು ಒಬ್ಬರಿಂದ ಅಧಿಕಾರ ಪತ್ರವನ್ನು ಪಡೆದುಕೊಂಡು ಮಾಡಿಕೊಟ್ಟಿರುತ್ತಾರೆ ದಿಃ 22-12-2011 ರಂದು ನಾನು ನಿವೇಶನವನ್ನು ಖರೀದಿ ಮಾಡಿರುತ್ತೇನೆ. ನಾನು ನಿವೇಶನವನ್ನು ಖರೀದಿ ಮಾಡುವ ಮುಂಚಿತವಾಗಿ ಈ ದಾವಾ ಸ್ವತ್ತು ಯಾರಿಗೆ ಸೇರಿರುತ್ತದೆ ಎಂಬುದರ ಬಗ್ಗೆ ಪರಿಶೀಲನೆ ಮಾಡಿರುವುದಿಲ್ಲ. ಸದರಿ ಮುಜೂರ್ ಅಲ್ತಾಫ್ ರವರು ಮಂಚಿತವಾಗಿ ಯಾಅ ಹೆಸರಿನಲ್ಲಿ ಆಸ್ತಿಯು ಕ್ರಯದ ಮೂಲಕ ಬಂದಿತ್ತು ಎಂಬುದು ನನಗೆ ನೆನಪಿಲ್ಲ ಅದಕ್ಕೆ ಸಂಬಂಧಪಟ್ಟ ವ್ಯವಹಾರಗಳ ಬಗ್ಗೆ ಸಹ ನನಗೆ ಮಾಹಿತಿ ಇಲ್ಲ. ನನಗೆ ಅಧಿಕಾರ ಪತ್ರ ಪಡೆದುಕೊಂಡಿರುವ ವಿಷಯವನ್ನು ಹೊರತು ಪಡಿಸಿ ನಿವೇಶನದ ಬಗ್ಗೆ ಯಾವ ಮಾಹಿತಿಯು ಇಲ್ಲ ಎಂದರೆ ಸರಿ. ಈ ನ್ಯಾಯಾಲಯದ ಮುಂದೆ ಅರ್ಜಿದಾರರಿಗೆ ದಾವಾ ಆಸ್ತಿಗೆ ಸಂಬಂಧಪಟ್ಟ ಹಾಗೆ ಡಿಕ್ರಿಯಾಗಿತ್ತು ಎಂದರೆ ಸರಿಯಲ್ಲ

ಈ ಹಂತದಲ್ಲಿ ಶ್ರೀ ಬಿ ಡಿ ಜೆ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶವನ್ನು ಕೋರಿದ್ದು, ಕೋರಿಕೆ ಮೇರೆಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕರಿಸಿ ಓದಿ ಹೇಳಿ, ಕೇಳಿದಾಗ ಸರಿ ಇದೆ ಎಂದು ಒಪ್ಪಿರುತ್ತಾರೆ.)

ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ
ತಿಪಟೂರು.